ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 25.03.2025.

**ಪಾಟೀ ಸವಾಲು:** ಅರ್ಜಿದಾರ ಪರ ಶ್ರೀ ಬಿ.ಎ.ಡಿ. ವಕೀಲರಿಂದ:

ನಾನು ನನ್ನ ಗಂಡನಿಗೆ 2ನೇ ಹೆಂಡತಿ ಇರುತ್ತೇನೆ. ನನ್ನ ಅತ್ತೆ ಹೆಸರು ಶರಣಮ್ಮ ಇರುತ್ತದೆ. ನಿಪಿ-1ರ ದಾವೆಯಲ್ಲಿ ನನ್ನ ಅತ್ತೆಯನ್ನು ಪಾರ್ಟಿ ಮಾಡಿರಲಿಲ್ಲ ಎಂದರೆ ಸರಿ. ನಿಪಿ-1ರ ದಾವೆಯ ನೋಟೀಸ್ ನನ್ನ ಗಂಡನಿಗೆ ಮುಟ್ಟಿಲ್ಲ ಎಂದರೆ ಸರಿಯಲ್ಲ. ನಾನು ದಾವೆ ಮಾಡಿದ ಬಗ್ಗೆ ನನ್ನ ಗಂಡನಿಗೆ ಯಾವುದೇ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಅತ್ತೆ ಮತ್ತು ನನ್ನ ಗಂಡನ ಮಧ್ಯ ಪಾಲು ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-1ರ ದಾವೆಯಲ್ಲಿ ನನ್ನ ಗಂಡ ಯಾವ ವಕೀಲರಿಗೆ ಕೊಟ್ಟಿದ್ದ ಎಂದು ನನಗೆ ಗೊತ್ತಿಲ್ಲ. ನನ್ನ ಗಂಡನ ಸಹಿಯನ್ನು ನೋಡಿದರೆ ನನಗೆ ಗುರುತಿಸಲು ಆಗುವುದಿಲ್ಲ. ನಾನು ನಿಪಿ-1ರ ದಾವೆ ಮಾಡಿದ ನಂತರ ನನ್ನ ಗಂಡನನ್ನು ಬೇಟಿಯಾಗಿಲ್ಲ. ನಾನು ನನ್ನ ಗಂಡನಿಗೆ ಗೊತ್ತಿರಲಾರದೇ ನ್ಯಾಯಾಲಯಕ್ಕೆ ಸತ್ಯ ಸಂಗತಿಗಳನ್ನು ಮುಚ್ಚಿಟ್ಟು ಒಂದು ಸುಳ್ಳು ಪ್ರಾರ್ಥಮಿಕ ಡಿಕ್ರಿ ಮತ್ತು ಅಂತಿಮ ಡಿಕ್ರಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಅತ್ತೆಗೆ ಮತ್ತು ನನ್ನ ಗಂಡನಿಗೆ ನಷ್ಟ ಉಂಟು ಮಾಡುವ ಸಲುವಾಗಿ ನಿಪಿ-1ರ ದಾವೆಯಲ್ಲಿ ಸುಳ್ಳು ಡಿಕ್ರಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡ ಅಂತಿಮ ಅರ್ಜಿಯಲ್ಲಿ ನ್ಯಾಯಾಲಯದ ನಿಯೋಗಿ ದಾವಾ ಜಮೀನಗಳು ಅಳತೆ ಮಾಡಲು ಹೋದಾಗ, ಆತನಿಗೆ ನಾನು ನಿಪಿ-1ರಂತೆ ದಾವೆ ಮಾಡಿದ ವಿಷಯ ಗೊತ್ತಾಗಿದೆ ಎಂದರೆ ಸರಿಯಲ್ಲ. ನನಗಾಗಲಿ ಹಾಗೂ ಉಳಿದ ಎದುರುದಾರರಿಗೆ ಆಗಲಿ ನಿಪಿ-1ರ ದಾವೆ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಗೊತ್ತಿರದೇ ಕಾನೂನು ಬಾಹಿರವಾಗಿ ಒಂದು ಡಿಕ್ರಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಒಂದು ವೇಳೆ ನಿಪಿ-1ರ ಡಿಕ್ರಿ ರದ್ದಾದರೆ ನಿಜವಾದ ಸಂಗತಿಗಳು ನ್ಯಾಯಾಲಯಕ್ಕೆ ಗೊತ್ತಾಗುತ್ತವೆ ಎಂಬ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**